(ಇಂದು ದಿನಾಂಕ 22-07-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ವಾದಿ ಪರ ಶ್ರೀ ಪಿ.ಜಿ.ಎಚ್. ವಕೀಲರಿಂದ–**

ನಿ.ಡಿ.2 ರ ದಸ್ತಾವೇಜನ್ನು ಮಾಡುವ ಸಂದರ್ಭದಲ್ಲಿ ನಾಗಪ್ಪ ನಾರಾಯಣ ಗುನಗಾರವರು ತಮ್ಮ ವಾರಸುದಾರರ ಸಹಿಯನ್ನು ಸದರಿ ದಸ್ತಾವೇಜಿಗೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಿ.ಪಿ.2 ರ ದಾಖಲಾತಿಯ ಆಧಾರದ ಮೇರೆಗೆ ಕಂದಾಯ ದಾಖಲಾತಿಗಳು ನನ್ನ ಹೆಸರಿಗೆ ಬದಲಾವಣೆಯಾದ ನಂತರ ನಿ.ಡಿ.2 ರ ದಸ್ತಾವೇಜಿಗೆ ನಾಗಪ್ಪ ಗುನಗಾರವರ ಇತರ ವಾರಸುದಾರರ ಒಪ್ಪಿಗೆ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ಮಾಡಲಾಗಿರುವುದಿಲ್ಲ. ನಿ.ಡಿ. 2 ಕ್ಕೆ ಸಹಿ ಮಾಡಿರುವ ಗಣೇಶ ಜಿ. ಮಡಿವಾಳರವರು ಹಳಕಾರ ಗ್ರಾಮದವರು. ನನಗೆ ಸದರಿಯವರ ಪರಿಚಯ ಇರುತ್ತದೆ. ಗಣೇಶ ಜಿ. ಮಡಿವಾಳರವರು ಆಸ್ತಿಗಳ ಮಾರಾಟದ ಬಗ್ಗೆ ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ನಿ.ಡಿ.2 ಕ್ಕೆ ಸಹಿ ಮಾಡಿರುವ ಮತ್ತೊಬ್ಬ ಸಾಕ್ಷಿದಾರರಾದ ಈಶ್ವರ ಬಿ. ಪಟಗಾರರವರ ಪರಿಚಯ ಇರುತ್ತದೆ. ನಿ.ಡಿ.2 ಕ್ಕೆ ಸಹಿ ಮಾಡಿರುವಂತಹ ಸಾಕ್ಷಿದಾರರಾದ ಗಣೇಶ ಜಿ. ಮಡಿವಾಳ ಹಾಗೂ ಈಶ್ವರ ಬಿ. ಪಟಗಾರರವರು ಮುಂದಾಗಿ ನಿ.ಡಿ.2 ರ ದಾಖಲಾತಿಯನ್ನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ 'ಬ' ಪುರವಣಿ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಳ್ಳಲು ನಾಗಪ್ಪ ನಾರಾಯಣ ಗುನಗಾರವರ ಹೆಣ್ಣು ಮಕ್ಕಳು ಲಿಖಿತ ಒಪ್ಪಿಗೆಯನ್ನು ನೀಡಿರುತ್ತಾರಾ ಎಂದರೆ ಸಾಕ್ಷಿಯು

ಲಿಖಿತವಾಗಿ ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಒಪ್ಪಿಗೆಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾಗಪ್ಪ ನಾರಾಯಣ ಗುನಗಾರವರ ಹೆಣ್ಣು ಮಕ್ಕಳು ಮೌಖಿಕ ಸಮ್ಮತಿಯನ್ನು ನೀಡುವ ಸಂದರ್ಭದಲ್ಲಿ ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಇತರ ವ್ಯಕ್ತಿಗಳು ಇರಲಿಲ್ಲ.

ನಾಗಪ್ಪ ನಾರಾಯಣ ಗುನಗಾರವರು ದಾವಾ ಸ್ವತ್ತನ್ನು ಹೊರತುಪಡಿಸಿ ಇತರ ಸ್ವತ್ತುಗಳನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಇರಬಹುದು, ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾಗಪ್ಪ ನಾರಾಯಣ ಗುನಗಾರವರು 8 ನೇ ಪ್ರತಿವಾದಿಗೆ ದಾವಾ 'ಅ' ಪುರವಣಿಯ 1 ನೇ ಐಟಂ ಸ್ವತ್ತಿನ ಪೂರ್ಣ ಕ್ಷೇತ್ರದ ಪೈಕಿ 0-3-0 ಕ್ಷೇತ್ರವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನಗೆ ಮಾರಾಟ ಮಾಡಿರುವಂತಹ ದಾವಾ 'ಅ' ಪುರವಣಿಯ 3 ನೇ ಐಟಂ ಸ್ವತ್ತು ವಾದಿಗೆ ಯಾವುದೇ ರೀತಿಯಲ್ಲಿಯೂ ಬಂಧನಕಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯೊಂದಿಗೆ ಮಾಡಲಾದಂತಹ ಕ್ರಯದ ವ್ಯವಹಾರವೂ ಸಹ ವಾದಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ 'ಬ' ಪುರವಣಿ ಸ್ವತ್ತಿಗೆ ಸಂಬಂಧಪಟ್ಟಂತೆ ಖಾತೆಯನ್ನು ಕಾನೂನುಬಾಹಿರವಾಗಿ ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾಗಪ್ಪ ನಾರಾಯಣ ಗುನಗಾರವರು ತಮ್ಮ ಜೀವಿತ ಕಾಲದಲ್ಲಿ ಯಾವ ದಾಖಲಾತಿಗಳನ್ನು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗೆ ಲಭ್ಯವಾಗುವ ಕಾನೂನುಬದ್ಧವಾದ ಹಿಸ್ಸೆಯನ್ನು ನೀಡಲು ನನ್ನ ತಕರಾರು ಇರುವುದಿಲ್ಲ. ನಾನು ಕಾನೂನುಬಾಹಿರವಾಗಿ ದಾವಾ 'ಬ' ಪುರವಣಿ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡ ಬಗ್ಗೆ ವಾದಿಯು ಕುಮಟಾ ತಾಲೂಕು ಪಂಚಾಯತಿಗೆ ದೂರು ನೀಡಿದ್ದರು ಎಂದರೆ ಸರಿಯಲ್ಲ. ನಾನು ವಾದಿಗೆ ಮೋಸ ಮಾಡುವ ಉದ್ದೇಶದಿಂದ ಮೋಸತನದಿಂದ ನಿ.ಡಿ.2 ನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ